**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 742/2022**

| | | | |
|---|---|---|---|
| **ಹೆಸರು** | **:** | **ರಾಜಶೇಖರ** | **ದೋ.ಸಾ. 1** |
| **ತಂದೆಯ ಹೆಸರು** | **:** | **ಜಗನ್ನಾಥ** | **ಪ್ರಾ.ಸಾ. 1** |
| **ವಯಸ್ಸು** | **:** | **34 ವರ್ಷ** | **ದಿನಾಂಕಃ 06-06-2023** |
| **ಉದ್ಯೋಗ** | **:** | **ಚಾಲಕ** | |
| **ವಾಸಸ್ಥಳ** | **:** | **ಗಡಿನಿಂಗದಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿ ಗೊತ್ತು. ಚಾಸಾ-2 ನನ್ನ ಹೆಂಡತಿ. ಚಾಸಾ-2 ರಿಂದ ಚಾಸಾ-6 ರವರು ನನಗೆ ಗೊತ್ತು. ಚಾಸಾ-7 ನನ್ನ ತಾಯಿ. ಚಾಸಾ-8 ಮತ್ತು ಚಾಸಾ-9 ರವರು ನನಗೆ ಗೊತ್ತು.

ನನ್ನ ಹೆಂಡತಿಯಾದ ಚಾಸಾ-2 ರವರಿಂದ ಚಾಸಾ-3 ರವರು ಗಲೀಫ ಹೂವುಗಳನ್ನು ಪಡೆದುಕೊಂಡಿದ್ದರು. ಅದೇ ದಿನಾಂಕಃ 31-01-2022 ರಂದು ಸಂಜೆ 7.00 ಗಂಟೆ ಸುಮಾರಿಗೆ ಚಾಸಾ-3 ರವರು ಚಾಸಾ-2 ರವರಿಗೆ ಕರೆ ಮಾಡಿ ಗಲೀಪ ಹೂವುಗಳನ್ನು ವಾಪಸ್ಸು ತೆಗೆದುಕೊಂಡು ಹೊಗಲು ಹೇಳಿದಾಗ ಆಗ ನಾವು ಬೆಳಿಗ್ಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದಾಗ ಅವರು ಒಪ್ಪಲಿಲ್ಲ ಈ ದಿನವೆ ತೆಗೆದುಕೊಂಡು ಹೋಗಲು ಹೇಳಿದರು.

ನಂತರ ನಾನು ಮತ್ತು ಚಾಸಾ-2 ರವರು ಸೇರಿ ಗಡಿನಿಂಗದಳ್ಳಿಯಿಂದ ಚಂದನಕೇರಾಗೆ ನಾಲ್ಕು ಚಕ್ರದ ವಾಹನದಲ್ಲಿ ಚಾಸಾ-3 ರವರ ಮನೆಗೆ ಹೋಗಿರುತ್ತೇವೆ. ನಾನು ರಸ್ತೆಯಲ್ಲಿ ನಿಂತುಕೊಂಡಿದ್ದೆ ಹಾಗೂ ಚಾಸಾ-2 ರವರಿಗೆ ಚಾಸಾ-3 ರವರ ಮನೆಗೆ ಹೋಗಲು ಹೇಳಿದ್ದೆ. ನಂತರ ಚಾಸಾ-6 ರವರ ಮನೆ ಅಲ್ಲೆ ಪಕ್ಕದಲ್ಲಿ ಇದ್ದು ಅವರಿಗೆ ಮಾತಾಡುತ್ತ ನಿಂತಿದ್ದೆ. ನಂತರ ಚಾಸಾ-4 ರವರ ಮನೆ ಹತ್ತಿರ ಚಾಸಾ-2,ಚಾಸಾ-3 ಹಾಗೂ ಆರೋಪಿ ಜಗಳವಾಡುತಿದ್ದರು. ಆಗ ನಾನು ಚಾಸಾ-4 ರವರ ಮನೆ ಹತ್ತಿರ ಹೋಗಿ ನೋಡಿದಾಗ ಚಾಸಾ-4 ರವರ ಮನೆ ಒಳಗಡೆ ಆರೋಪಿ ನಿಂತಿದ್ದ. ಆಗ ನಾನು ಚಾಸಾ-2 ರವರಿಗೆ ಜಾಗ ಯಾವದ ಸರಿಯಾಗಿ ಇರುತ್ತದೆ ಅಲ್ಲಿ ಕುಳಿತುಕೊಳ್ಳಬೇಕು ಎಂದು ಹೇಳಿದ್ದೆ. ಆಗ ಆರೋಪಿ ಕಲ್ಲಿನಿಂದ ನನ್ನ ತಲೆಗೆ ಹೊಡೆದಿರುತ್ತ್ರಾನೆ. ಮತ್ತು ಇನ್ನೊಂದು ಕಲ್ಲು ತೆಗೆದುಕೊಂಡು ನನ್ನ ಬಲಗೈಗೆ ಹೊಡೆದಿರುತ್ತಾನೆ. ಅಷ್ಟರಲ್ಲಿ ನಾನು ಪ್ರಜ್ಞೆ ತಪ್ಪಿ ಕೆಳಗಡೆ ಬಿದ್ದಾಗ ಕಲ್ಲಿನಿಂದ ನನ್ನ ಗದ್ದಕ್ಕೆ ಹೊಡೆದಿರುತ್ತಾನೆ. ಮುಂದೆ ಏನಾಗಿದೆ ನನಗೆ ಗೊತಿಲ್ಲ. ಏಕೆಂದರೆ ನನಗೆ ಪ್ರಜ್ಞೆ ಇರಲಿಲ್ಲ. ನನಗೆ

ಪ್ರಜ್ಞೆ ಬಂದಾಗ ನಾನು ಚಿಂಚೋಳಿ ಸರಕಾರಿ ಆಸ್ಪತ್ರೆಯಲ್ಲಿ ಇದ್ದೆ.

ಆಸ್ಪತ್ರೆಯಲ್ಲಿ ರಟಕಲ ಪೊಲೀಸರು ಬಂದು ನನ್ನಿಂದ ಮಾಹಿತಿ ಪಡೆದಿದ್ದರು. ಆಗ ಆರೋಪಿ ಸಹ ಆಸ್ಪತ್ರೆಯಲ್ಲಿಯೇ ಇದ್ದ. ಆಸ್ಪತ್ರೆಯಲ್ಲಿಯೇ ಪೊಲೀಸರು ಆರೋಪಿತನನ್ನು ಹಿಡಿದಿರುತ್ತಾರೆ. ನಂತರ ನನ್ನ ಅಂಬುಲೆನ್ಸನಲ್ಲಿ ಬೀದರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಬೀದರ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಶ್ರೀವಾಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಶ್ರೀವಾಲಿ ಆಸ್ಪತ್ರೆಯಲ್ಲಿ ಇದ್ದಾಗ ರಟಕಲ ಪೊಲೀಸರು ಬಂದು ನನ್ನಿಂದ ಮಾಹಿತಿ ಪಡೆದು ಪ್ರಕರಣವನ್ನು ದಾಖಲಿಸುತ್ತಿಯಾ ಎಂದು ಕೇಳಿದಾಗ ನಾನು ಊರಿಗೆ ಬಂದು ನಾಲ್ಕು ಜನರಿಗೆ ವಿಚಾರಣೆ ಮಾಡಿ ಹೇಳುತ್ತೇನೆ ಎಂದು ತಿಳಿಸಿದ್ದೇನೆ. ನಂತರ ದಿನಾಂಕಃ 06 ಅಥವಾ 07 ರಂದು ಬಂದು ಆರೋಪಿಯ ವಿರುದ್ದ ದೂರನ್ನು ನೀಡಿದ್ದೇನೆ. ಸಾಕ್ಷಿ ತಾವು ನೀಡಿರುವ ದೂರನ್ನು ನೋಡಿ ಗುರುತಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದೇ ದಿನ ಮಧ್ಯಾಹ್ನ 3.00 ಗಂಟೆ ಬಂದು ಪೊಲೀಸರು ಚಾಸಾ-4 ರವರ ಮನೆಯ ಹತ್ತಿರ ಚಾಸಾ- 8 ಮತ್ತು ಚಾಸಾ-9 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಒಂದು ಕಲ್ಲು ಮತ್ತು ಒಂದು ರಕ್ತ ಹತ್ತಿದ ನನ್ನ ಶರ್ಟನ್ನು ಜಪ್ತಿ ಮಾಡಿಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿ ಕೇಳಿದಾಗ ಅದಲ್ಲಿರುವದು ತಾವೆ ಎಂದು ನುಡಿದಿದ್ದಾರೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರ ಭಾವಚಿತ್ರವನ್ನು ದಿನಾಂಕಃ 6 ಅಥವಾ 7 ರಂದು ಪಡೆದುಕೊಳ್ಳಲಾಗಿದೆ. ಸಾಕ್ಷಿಗೆ ಒಂದು ರಕ್ತ ಹತ್ತಿದ ಶರ್ಟನ್ನು ತೋರಿಸಿ ಕೇಳಿದಾಗ ಸದರಿ ಶರ್ಟ ತನ್ನದೆ ಎಂದು ನುಡಿದಿರುತ್ತಾರೆ. ಸದರಿ ರಕ್ತ ಹತ್ತಿದ ಶರ್ಟನ್ನು ಮು.ಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಕಲ್ಲು ತೋರಿಸಿ ಕೇಳಿದಾಗ ಅದೇ ಕಲ್ಲಿನಿಂದ ಹೊಡೆದಿರುವುದಾಗಿ ನುಡಿಯುತ್ತಾರೆ. ಸದರಿ ಕಲ್ಲನ್ನು ಮು.ಮಾ-2 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಬಿಳಿ ಬಣ್ಣದ ಬನಿಯನ್ನು ತೋರಿಸಿ ಕೇಳಿದಾಗ ಅದು ಯಾರದು ಎಂದು ಗೊತ್ತಿಲ್ಲ ಎಂದು ನುಡಿದಿದ್ದಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ದಿನಾಂಕಃ 07-02-2022 ರಂದು ಮಧ್ಯಾಹ್ನ 4.5 ರಿಂದ 4.35 ಗಂಟೆ ಸುಮಾರಿಗೆ ಪಂಚನಾಮೆ

ಮಾಡುವಾಗ ಒಂದು ಬನಿಯನ್ ಸಹ ಜಪ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬನಿಯನ್ ನನ್ನದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರು ಸಮಯ ಕೋರಿದ್ದರಿಂದ 400 ರೂ.ಗಳು ಕೊಡುವಂತೆ ಆದೇಶಿಸಿ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**